***ಓ.ಎಸ್.ನಂ.380-2016***

***ಪಿ.ಡಬ್ಲ್ಯೂ-1.***

***<u>ದಿಃ 08-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಮುಖ್ಯವಿಚಾರಣೆ ಃ ವಾದಿ ಪರ ವಕೀಲರಿಂದ.</u>***

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

*2.* ನಾನು ನ್ಯಾಯಾಲಯಕ್ಕೆ ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-*1* ಎಂದು, ದಿಃ*07-11-1955* ರಂದು ನನ್ನ ತಂದೆಗೆ ನೀಡಿರುವ ಸಾಗುವಳಿ ಪತ್ರದ ಧೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*2* ಎಂದು, ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಿದ ಕುರಿತಾದ ರಶೀದಿಯನ್ನು ನಿ.ಪಿ-*3* ಎಂದು, ದಾವಾ ಅನುಸೂಚಿತ ಸ್ವತ್ತಿನ ಕುರಿತಾದ *2017-18* ನೇ ಸಾಲಿನ ಪಹಣಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*4* ಎಂದು, ನನ್ನ ತಂದೆ ನನ್ನ ಹೆಸರಿಗೆ ಜಾರಿಮಾಡಿಕೊಟ್ಟಿರುವ ಸಾಮಾನ್ಯ ಮುಕ್ತಿಯಾರ್ ನಾಮೆ ಹಾಜರುಪಡಿಸಿದ್ದು ನಿ.ಪಿ-*5* ಎಂದು, ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ *1979-80* ರಿಂದ *1999-2000* ನೇ ಸಾಲಿನ ವರೆಗೆ *6* ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-*6* ರಿಂದ *11* ಎಂದು, ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ, *2015-16* ನೇ ಸಾಲಿನ ಪಹಣಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*12* ಎಂದು, ಎಂ.ಆರ್ *24/88-89* ರ ಧೃಡೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*13* ಎಂದು ಗುರುತಿಸಲಾಯಿತು.

<u>ಪಾಟೀಸವಾಲಿಗಾಗಿ ಮುಂದೂಡಲಾಯಿತು.</u>

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***